


ಎಡದಿಂದ ಬಲಕ್ಕೆ:

1. ಅದಾವ ಲೋಕವೋ ಏನೋ, ನೋಡುವುದು ಹೇಗೆ? (4)
3. ಬಂಡವಾಳವಿಲ್ಲದವ ಪಾಪ, ಗರೀಬ (3)
4. ಸೇಡು ತೀರಿಸಲು ಇಂಥ ಸ್ಫೋಟ (3)
6. ನೀರಿನ ಹಾವಳಿಯಿಂದಾಗಿ ಆಶ್ರಯ ತಪ್ಪಿ ಬಂದವ (4)
7. ಯಾರಿಗೇ ಆದರೂ ಆಸರೆ ನೀಡಬಲ್ಲವ ರಾಜನೇ ಹೌದು (3)
9. ಹರಕೆ ತೀರಿಸಿ ಹಿಂದಿರುಗಿದ ಗುರುತು ಹೀಗೆ (3)
11. ಶಾಲಾ ಆವರಣದಲ್ಲಿ ಸದಾ ಏನಿಂಥ ಧ್ವನಿ, ಕೂಗು? (3)
13. ತೇರನ್ನೆಳೆವ ಕೈಂಕರ್ಯಕ್ಕೆ ನಡೆ (3)
15. ಆ ಕಾಡನ್ನು ಕೂಡುವ ಹಾದಿ ಸೊಟ್ಟ ಸೊಟ್ಟ (4)
17. ಸೇಬನ್ನು ತಿನ್ನುವ ಅದೃಷ್ಟ ಒದಗೀತೇ? (3)
18. ವರ್ಣವೇನೇ ಇರಲಿ, ಆತನೇ ಸಾಗರ ದೇವತೆ (3)
19. ಜರತಾರಿ ಕೊಳ್ಳಲು ಹೋಗಿ ರತ್ನಾಭರಣ ತಂದರೇ? (4)

ಮೇಲಿಂದ ಕೆಳಕ್ಕೆ:

1. ಅನ್ನವನ್ನು ನೀಡುವುದು ಇದೇ ಭೂಮಿಯೇ ತಾನೇ? (3)
2. ಕುಸಿಯುತ್ತಿರುವಾಗಲೂ ಕಿತ್ತುಕೊಳ್ಳುವುದೇ? (3)
3. ಬರುಬರುತ್ತ ಆತನ ವರ್ತನೆ ಎಂಥ ಅನಾಗರಿಕ ನೋಡಿ (3)
5. ಥಳುಕು ತೋರುವುದಕ್ಕೆಂದು ಎಲ್ಲೆಲ್ಲೂ ಚಿಗುರೆಲೆ (3)
7. ಆತುರವಾಯಿತೆಂದರೆ ಬರೀ ಗದ್ದಲ (4)
8. ಪಣ ತೊಟ್ಟು ಹೆಚ್ಚು-ಕಡಿಮೆ ಇಲ್ಲದೆ ಅರ್ಪಿಸುವುದೆಂದರೆ? (4)
9. ಕೊಟ್ಟಿಲ್ಲ, ತೆಗೆದಿಲ್ಲ-ಒಟ್ಟಾರೆ ಬರೀ ಮೋಸ (4)
10. ಕಾಳು ಹುರಿಯಲು ಒಳ್ಳೇ ಕಟ್ಟುಮಸ್ತು ಮನುಷ್ಯ (4)
12. ದೇವಕನ್ಯೆಯ ಮುಖ ನೋಡಿದ್ದೀರಾ? (3)
14. ಹಣವಿರಲಿಲ್ಲವೆಂದು ಬಿಟ್ಟು ಹೋಗಿಬಿಡುವುದೇ? (3)
15. ಅಂಜು ಬುರುಕಿಗೆ ಹೇಗೆ ಸಿಕ್ಕೀತು ತಾವರೆ? (3)
16. ಕಾವೇರಿಯ ಮಗಳು-ಗೊತ್ತೇ? (3)

### ಪದಬಂಧ 01-08-2013 ರ ಉತ್ತರಗಳು

ಎಡದಿಂದ ಬಲಕ್ಕೆ:
1. ಹಸ್ತಾಂತರ; 3. ವ್ಯಾಕುಲ; 4. ಹರಷಿ; 6. ದಾರಿದೋರು; 7. ರಿಣಭಯ; 9. ನಮಸ್ಕಾರ; 12. ವಿಷವಾತ; 14. 'ರುಸಪ'; 15. ಧನಿಕ; 16. ತ್ರಸ್ತಜನ.

ಮೇಲಿಂದ ಕೆಳಕ್ಕೆ:
1. ಹಲವಾರು; 2. ರಹದಾರಿ; 3. ವ್ಯಾಪಾರಿ; 5. ಸುಲಭ; 6. ದಾಸೀಜನ; 8. ಯಥೋಚಿತ; 10. ಮಲರು; 11. ರಕ್ಷಾಪತ್ರ; 12. ವಿದ್ಯಾಧನ; 13. ವಾಚಕ.

# ಪ್ರಶ್ನಾಂಕಣ

## ದುಂಬಿ- ಏನು ವಿಶೇಷ?

ದುಂಬಿ-ಅದೊಂದು ತುಂಬ ಪರಿಚಿತ ಕೀಟ. ಕೀಟ ವರ್ಗದಲ್ಲಿ ಸಂಪೂರ್ಣ ವಿಭಿನ್ನ ಪ್ರತ್ಯೇಕ ಪಂಗಡವಾಗಿರುವುದೇ ದುಂಬಿಗಳ ಮೊದಲ ವಿಶೇಷ. ವೈಜ್ಞಾನಿಕವಾಗಿ 'ಕೋಲಿಯಾಪ್ಟೆರಾ' ಎಂದು ವರ್ಗೀಕರಣಗೊಂಡಿರುವ ಸಕಲ ದುಂಬಿಗಳೂ ಅತ್ಯಂತ ವಿಶೇಷವಾದ ಒಂದು ಶಾರೀರಿಕ ಲಕ್ಷಣವನ್ನೂ ಹೊಂದಿದೆ: ಅವುಗಳ ನಾಲ್ಕು ರೆಕ್ಕೆಗಳ ಪೈಕಿ ಮುಂದಿನ ಎರಡು ರೆಕ್ಕೆಗಳು ಕೊಂಬಿನಂಥ ಗಟ್ಟಿ ವಸ್ತುವಿನಿಂದ ರಚನೆಗೊಂಡಿವೆ. 'ಎಲೈಟ್ರಾ' ಎಂಬ ಈ ಚಿಪ್ಪು ರೆಕ್ಕೆಗಳು ದುಂಬಿ ಹಾರುವಾಗ ಸುಮ್ಮನೇ ತೆರೆದು ನಿಲ್ಲುತ್ತವೆ; ಹಿಂದಿನ ಎರಡು ರೆಕ್ಕೆಗಳಂತೆ ಅವು ಬಡಿಯುವುದಿಲ್ಲ, ಹಾರಾಟಕ್ಕೆ ನೆರವಾಗುವುದಿಲ್ಲ. ಆದರೆ ಹಾರದಿದ್ದಾಗ ದುಂಬಿಯ ಹಿಂದಿನ ರೆಕ್ಕೆಗಳೂ ಸೇರಿದಂತೆ ಇಡೀ ಬೆನ್ನನ್ನು ಕವಚದಂತೆ ಮುಚ್ಚಿ ನಿಲ್ಲುತ್ತವೆ. 'ಎಲೈಟ್ರಾ'ದ ಅಸ್ತಿತ್ವವೇ ದುಂಬಿಗಳ ಪರಮ ವೈಶಿಷ್ಟ್ಯ.

ದುಂಬಿಗಳನ್ನು ಅದ್ವಿತೀಯವಾಗಿಸಿರುವ ವೈಶಿಷ್ಟ್ಯ ಅವುಗಳ ವೈವಿಧ್ಯ. ಧರೆಯ ಇಡೀ ಜೀವಲೋಕದಲ್ಲಿ ಈ ವರೆಗೆ ಗುರುತಿಸಲಾಗಿರುವ ಸುಮಾರು ಹದಿನೆಂಟು ಲಕ್ಷ ಪ್ರಭೇದಗಳಲ್ಲಿನ ಹದಿನಾಲ್ಕೂವರೆ ಲಕ್ಷ ಪ್ರಾಣಿ ಪ್ರಭೇದಗಳಲ್ಲಿರುವ ಏಳು ಲಕ್ಷ ಕೀಟ ಪ್ರಭೇದಗಳ ಅರ್ಧದಷ್ಟು ಎಂದರೆ ಮೂರೂವರೆ ಲಕ್ಷ ಪ್ರಭೇದಗಳು ದುಂಬಿಗಳದೇ ಆಗಿದೆ. ಹೀಗೆ ಗರಿಷ್ಠ ವೈವಿಧ್ಯ ಪಡೆದು ಜೊತೆಗೆ ಸರ್ವಜೀವಾವಾರಗಳನ್ನೂ ಆಕ್ರಮಿಸಿರುವ ದುಂಬಿಗಳ ಅಧ್ಯಯನದಲ್ಲಿ ತೊಡಗಿರುವ ಕೀಟ ವಿಜ್ಞಾನಿಗಳು ತಮ್ಮ ಅತೀವ ಅಚ್ಚರಿಯ ಅಭಿವ್ಯಕ್ತಿಯಾಗಿ ಭೂಮಿಗೆ 'ದುಂಬಿಗಳ ಗ್ರಹ' (ಪ್ಲಾನೆಟ್ ಆಫ್ ದಿ ಬೀಟ್ಲ್ಸ್)



ಎಂಬ ಅಭಿಧಾನವನ್ನೂ ನೀಡಿದ್ದಾರೆ. ವೈವಿಧ್ಯಕ್ಕೆ ತಕ್ಕಂತೆ ದೇಹ ಗಾತ್ರದಲ್ಲೂ ದುಂಬಿಗಳದು ಅಸದಳ ವೈವಿಧ್ಯ; ಚುಕ್ಕಿ ಗಾತ್ರದಿಂದ ಗುಬ್ಬಚ್ಚಿ ಗಾತ್ರದವರೆಗೆ!

ಇನ್ನೂ ವಿಸ್ಮಯ ಏನೆಂದರೆ ರೂಪ ವೈವಿಧ್ಯದಲ್ಲೂ ದುಂಬಿಗಳದೇ ಪ್ರಾಣಿ ಸಾಮ್ರಾಜ್ಯದಲ್ಲಿ ಪ್ರಪ್ರಥಮ ಸ್ಥಾನ. ಅತ್ಯಂತ ಸುಂದರ ಅತ್ಯಂತ ವರ್ಣಮಯ ಸುರಸುಂದರ ದುಂಬಿಗಳಿವೆ (ಚಿತ್ರ ನೋಡಿ) ಅಷ್ಟೇ ಘೋರ, ವಿಕಾರ, ಭಯಂಕರ ರೂಪಿಗಳೂ ಲಕ್ಷಾಂತರ ಸಂಖ್ಯೆಯಲ್ಲಿವೆ. ಇರುಳಿನಲ್ಲಿ ತಮ್ಮ ಶರೀರದಲ್ಲೇ ಉಜ್ವಲ ದೀಪ ಹಚ್ಚುತ್ತ ಆರಿಸುತ್ತ 'ಹಾರಾಡುವ ನಕ್ಷತ್ರ'ಗಳಂತೆ ಕಂಗೊಳಿಸುವ 'ಮಿಂಚು ಹುಳು'ಗಳೂ ದುಂಬಿಗಳೇ.

ವಿಪರ್ಯಾಸ ಏನೆಂದರೆ ದುಂಬಿಗಳ ಹೇರಳ ಪ್ರಭೇದಗಳು ಸಸ್ಯ ಮಿತ್ರರಾಗಿ, ಪರಿಸರ ಸ್ನೇಹಿಗಳಾಗಿದ್ದರೆ ಮತ್ತಷ್ಟೇ ಲಕ್ಷಾಂತರ ಪ್ರಭೇದಗಳು ಮಹಾನ್ ಪಿಡುಗುಕಾರಕಗಳಾಗಿ 'ರೈತ ಶತ್ರು'ಗಳೂ ಆಗಿವೆ.

■ ಎನ್. ವಾಸುದೇವ್